**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No. 18/2019**

ಆರ್**.**ಡಬ್ಲ್ಯೂ**. 2**

ದಿನಾಂಕಃ **12.02.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ**.** ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ**.**

ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಹೆಚ್**.**ಆರ್**.**ಕೆ**./** ಪಿ**.**ಆರ್**.**ಜೆ**.** ವಕೀಲರಿಂದಃ

ಸ್ವಾಧೀನಗೊಂಡ ಜಮೀನು ಕೋರಾ ಗ್ರಾಮದಲ್ಲಿದೆ. ರಾಷ್ಟ್ರೀಯ ಹೆದ್ದಾರಿ ಕೋರಾ ಗ್ರಾಮದ ಮೂಲಕ ಹಾದು ಹೋಗಿರುತ್ತದೆ ಎಂದರೆ ಸರಿ. ಕೋರಾ ಗ್ರಾಮ, ಹೋಬಳಿ ಹೆಡ್ ಕ್ವಾಟರ್ ಎಂದರೆ ಸರಿ. ಸದರಿ ಗ್ರಾಮ ತುಮಕೂರಿನಿಂದ 10 ಕಿ.ಮೀ ಅಂತರದಲ್ಲಿ ಇರುತ್ತದೆ. ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 1/2 ಕಿ.ಮೀ ಅಂತರದಲ್ಲಿ ಕೋರಾ ಗ್ರಾಮ ಇರುತ್ತದೆ ಎಂದರೆ ಸರಿಯಲ್ಲ. ಸ್ವಾಧೀನಗೊಂಡ ಜಮೀನು ಕೋರಾ ಗ್ರಾಮದಲ್ಲಿದ್ದು, ರಾಷ್ಟ್ರಿಯ ಹೆದ್ದಾರಿಗೆ ಹಾದು ಹೋಗಿರುವುದರಿಂದ ಮತ್ತು ಹೋಬಳಿ ಹೆಡ್ ಕ್ವಾಟರ್ ಆಗಿದ್ದು ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹತ್ತಿರದಲ್ಲಿರುವುದರಿಂದ ಸ್ವಾಧೀನಗೊಂಡ ಜಮೀನು ಹೆಚ್ಚು ಮೌಲ್ಯ ವಿರುತ್ತದೆ ಎಂದರೆ ಗೊತ್ತಿಲ್ಲ. 1 ನೇ ಎದುರುದಾರ

ನಿಗದಿಪಡಿಸಿರುವ ಪರಿಹಾರದ ಹಣ ಕಡಿಮೆ ಎಂಬ ವಿಚಾರ ನನಗೆ ಗೊತ್ತು ಎಂದರೆ ಸರಿಯಲ್ಲ. ಜಮೀನಿನ ಮಧ್ಯಭಾಗದಲ್ಲಿ ರೈಲ್ವೆ ಹಳಿಗಳು ಹಾದುಹೋದರೆ ರೈಲ್ವೆ ಹಳಿಗಳ ಎರಡು ಬದಿಗಳಲ್ಲಿ ಇರುವ ಜಮೀನು ವ್ಯವಸಾಯಕ್ಕೆ ಉಪಯೋಗವಾಗುವುದಿಲ್ಲ ಎಂದರೆ ಸರಿಯಲ್ಲ, ಅದರ ಮೌಲ್ಯ ಸಹ ಕುಂಠಿತವಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರ ರೈಲ್ವೆ ಹಳಿಗಳ ಒಂದು ಬದಿಯ ಜಮೀನಿನಿಂದ ಮತ್ತೊಂದು ಕಡೆಯ ಜಮೀನಿಗೆ ಹೋಗಲು 1 ರಿಂದ 2 ಕಿ.ಮೀ ದೂರದಿಂದ ಕಾಲ್ನಡಿಗೆಯಲ್ಲಿ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ರೈಲ್ವೆ ಹಳಿಗಳು ಜಮೀನಿನ ಮಧ್ಯ ಭಾಗದಲ್ಲಿ ಹಾದು ಹೋಗುವುದರಿಂದ ಜಮೀನಿನ ಮಾಲೀಕರಿಗೆ ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು